Indian Journal of History and Archaeology

ISSN (E): 2582-225X
Vol-1 Issue 2, September-October, 2019,. 25-33

# ಮೈಸೂರು ಒಡೆಯರ ಕಾಲದ ಐತಿಹ್ಯಗಳು

ಡಾ.ಕೆ.ಪ್ರಭು

**ಡಾ.ಕೆ.ಪ್ರಭು**
ಸಹಾಯಕ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ
ಮೈಸೂರು, ೦೬.

**ಜಾನಪದ ಹಿನ್ನೆಲೆ:**

ಮೌಖಿಕ ಪರಂಪರೆಯನ್ನು ಜಾನಪದವೆಂದು ಒಪ್ಪುವ ನಾವು ಮೌಖಿಕವಾಗಿ ಬಂದುದೆಲ್ಲ ಜಾನಪದವಲ್ಲ ಎಂಬ ತಿಳುವಳಿಕೆ ಜೊತೆಗಿದ್ದು–ಸಂಸ್ಕೃತ ಭಾಷೆಯಲ್ಲೂ ಮೌಖಿಕವಾಗಿ ಹರಿದು ಬರುತ್ತಿದ್ದ ವೇದ, ಉಪನಿಷತ್ತು, ಪುರಾಣ, ರಾಮಾಯಣ, ಮಹಾಭಾರತಗಳನ್ನೂ ಸಂಸ್ಕೃತ ಭಾಷೆಯ ಜಾನಪದವೆಂದೇ ಸ್ವೀಕರಿಸಿದ್ದೇವೆ. ಕಾಲಕ್ರಮದಲ್ಲಿ ಇವುಗಳೂ ಅಕ್ಷರಕ್ಕಿಳಿಯುವಾಗ ಏನೇನನ್ನು ಕೂಡಿಕೊಂಡವೋ ಏನೇನೆಲ್ಲ ಕಳೆದುಕೊಂಡವೋ ಎಂಬುದನ್ನು ಹೇಳಲಾಗುವುದಿಲ್ಲ. ಆದರೆ ಇವು ಕೆಲವೊಮ್ಮೆ ಧಾರ್ಮಿಕ ಗ್ರಂಥಗಳೆನಿಸಿದರೂ ಇವುಗಳಲ್ಲಿ ಐತಿಹಾಸಿಕ ವಿಷಯಗಳೂ ಅಂತರ್ಗತವಾಗಿರುವುದನ್ನು ಮರೆಯುವಂತಿಲ್ಲ. ವಾಸ್ತವ ಸಂಗತಿಯೆಂದರೆ ನಮ್ಮ ಅಲಂಕಾರಿಕರು ಮಹಾಭಾರತ–ರಾಮಾಯಣಗಳನ್ನು ಇತಿಹಾಸಗಳೆಂದೇ ಕರೆದಿದ್ದಾರೆ. ಅವುಗಳಲ್ಲಿ ಎಷ್ಟೇ ಪೌರಾಣಿಕಾಂಶಗಳಿರಲಿ ಎಷ್ಟೇ ಐತಿಹ್ಯಗಳಿರಲಿ ಅವುಗಳೆಲ್ಲವುಗಳ ಆಂತರ್ಯದಲ್ಲಿ ಇತಿಹಾಸ ಹುದುಗಿರುವುನ್ನು ತೆರೆದು ತೋರಿಸುವ ಪ್ರಯತ್ನ ನಡೆದಿದೆ.

ಪುರಾಣಶಾಸ್ತ್ರಕಾರ ಯಹ್ಯೂಮರಸ ಎಂಬುವನು ಐತಿಹಾಸಿಕ ಸಿದ್ಧಾಂತಕ್ಕೆ 'ಪುರಾಣಗಳೆಂದರೆ ಅವು ಪ್ರಾಚೀನ ಮಾನವನ ಇತಿಹಾಸ' ಎಂದು ಹೇಳುತ್ತದೆ. ಹಾಗೆ ಹೇಳುವುದಾದರೆ ರಾಮಾಯಣ–ಮಹಾಭಾರತಗಳು ಇತಿಹಾಸ ಯುಗದ ಹಿಂದೂ ಬಣಗಳ ಜೀವಿತಕ್ಕೆ ಸಂಬಂಧಪಟ್ಟವುಗಳೇ ಆಗಿವೆ. ಈ ಬಣಗಳ ಇತಿಹಾಸ ಹಿಂದೂ

ಪುರಾಣಗಳಲ್ಲಿ ಸೇರಿ ಆ ಕಾಲದ ವೀರರಿಗೆ ದೇವತಾ ಸ್ಥಾನವನ್ನು ನೀಡಲಾಗಿದೆ. ಜಾನಪದ ಕ್ಷೇತ್ರದಲ್ಲಿಯೂ ಅಲಿಖಿತ ರೂಪದಲ್ಲಿರುವ ಪುರಾಣ ಕಥೆಗಳಲ್ಲಿ ಅಡಗಿರುವ ಅಂಶಗಳನ್ನು ಅಧ್ಯಯನ ಮಾಡಿದರೆ ಅಸಂಖ್ಯಾತ ದೇವತೆಗಳ ಐತಿಹಾಸಿಕತೆ ಬಯಲಾಗುತ್ತದೆ.

ಹಿಂದೂ ಪುರಾಣಗಳ ಸಂಗ್ರಹ ಹಾಗೂ ಸಂಪಾದನಾ ಕಾರ್ಯ ವ್ಯಾಸ ಪರಂಪರೆಯಲ್ಲಿ ನಡೆಯಿತೆಂದು ಹೇಳುವುದು ಸರಿಯಷ್ಟೆ. 27ಕ್ಕೂ ಹೆಚ್ಚು ಜನ ವ್ಯಾಸರ ಹೆಸರನ್ನು ಹೇಳಿಕೊಂಡು ಬರಲಾಗಿದೆ. ವ್ಯಾಸ ಎಂಬ ಪದ ಒಂದು ಬಿರುದು ಎಂದೂ ಹೇಳುತ್ತಿರುವುದರಿಂದ 'ವ್ಯಾಸ' ಎಂಬುದು ಮೌಖಿಕ ಸಂಪ್ರದಾಯದ ವಿಚಾರಗಳನ್ನು ಸಂಗ್ರಹಿಸುವ ಹಾಗೂ ಸಂಪಾದಿಸುವ ಕಾರ್ಯಕರ್ತೃಗಳಿಗೆ ಹೇಳಿಕೊಂಡು ಬಂದಿರಬಹುದಾದರೆ ವ್ಯಾಸ ಎಂಬ ಪದ ಜಾನಪದ ವಿದ್ವಾಂಸ ಪದಕ್ಕೆ ಪರ್ಯಾಯ ಪದವೆನಿಸುತ್ತದೆ. ಅದು ಒತ್ತಟ್ಟಿಗಿರಲಿ, ಮೌಖಿಕ ಪರಂಪರೆಯಲ್ಲಿ ಬರುತ್ತಿದ್ದ ಈ ಪುರಾಣಗಳು ಭಾರತದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಇತಿಹಾಸಗಳ ದಾಖಲೆಗಳೆಂಬುದನ್ನು ಖಚಿತ ಪಡಿಸಿದ್ದಾರೆ.

ಗ್ರೀಕ್, ಬ್ಯಾಬಿಲೋನಿಯಾ, ಈಜಿಪ್ಟ್ ಮೊದಲಾದ ದೇಶಗಳ ಇತಿಹಾಸವು ಕ್ರಿ.ಪೂ. 4000 ವರ್ಷಗಳಿಗಿಂತಲೂ ಹಿಂದಕ್ಕೆ ಹೋದರೂ ಭಾರತದ ಇತಿಹಾಸ ಅಷ್ಟು ಕಾಲ ಹಿಂದಕ್ಕೆ ಹೋಗುತ್ತಿಲ್ಲ. ಅಂದರೆ ಆರ್ಯಪೂರ್ವ ಭಾರತದ ಅರ್ಥಾತ್ ಪ್ರಾಗ್‌ಭಾರತೀಯ ಇತಿಹಾಸದ ಸಂಶೋಧನೆಗೆ ಪ್ರಯತ್ನಗಳು ನಡೆಯಲೇ ಇಲ್ಲ ಎಂದರೂ ತಡೆಯುತ್ತದೆ. ಈ ಅವಧಿಯ ಇತಿಹಾಸವನ್ನು ಅವಜ್ಞೆ ಮಾಡಿ ಮೌರ್ಯರ ಕಾಲದಿಂದ ಇತಿಹಾಸವನ್ನು ಪ್ರಾರಂಭಿಸುತ್ತಾರೆ. ಏಕೆಂದರೆ ಇದಕ್ಕಿಂತ ಹಿಂದಿನ ಇತಿಹಾಸ ಲಿಖಿತ ರೂಪದಲ್ಲಿ ಸಿಕ್ಕಿಲ್ಲದಿರುವುದೇ ಕಾರಣವೆಂದು ಹೇಳುತ್ತಾರೆ.

ಹೀಗಿದ್ದಾಗಲೂ ಪಾರ್ಜಿಟಾರ್ ಎಂಬ ಇತಿಹಾಸ ಸಂಶೋಧಕ ಪ್ರಾಚೀನ ಭಾರತದ ಇತಿಹಾಸ ಪರಂಪರೆಗೆ ಒಂದು ಮಹೋನ್ನತ ಕೊಡುಗೆಯನ್ನಿತ್ತನು. 1922ರಲ್ಲಿ ಪ್ರಕಟವಾದ ಅವನ 'ಏನ್ಷಿಯಂಟ್ ಇಂಡಿಯನ್ ಹಿಸ್ಟಾರಿಕಲ್ ಟ್ರೆಡಿಶನ್' ಎಂಬ ಉದ್ಗ್ರಂಥವು ಇತಿಹಾಸ ಗ್ರಂಥಲೋಕದಲ್ಲೇ ಒಂದು ಮಹತ್ವದ ದಾಖಲೆ ಎನಿಸಿತು. ಅವನು ತನ್ನ ಈ ಗ್ರಂಥದಲ್ಲಿ ವೇದ ಕಾಲದಿಂದ ಹಿಡಿದು ಮಹಾಭಾರತದ ಕಾಲದವರೆಗಿನ ಸುಮಾರು 95 ಸಂತತಿಗಳನ್ನು ಹೆಸರಿಸಿದ್ದಾನೆ. ಕಾಲೈಕ್ಯದ ದೃಷ್ಟಿಯಿಂದ ಪಾರ್ಜಿಟಾರ್‌ನಲ್ಲಿ ಸತ್ಯಕ್ಕೆ ಸಮೀಪವಾಗಿರುವುದನ್ನು ಗಮನಿಸಬಹುದಾಗಿದೆ. ಇಷ್ಟೆಲ್ಲವನ್ನು ಹೇಳುವ ಅಗತ್ಯವೆಂದರೆ ಭಾರತೀಯರು ಇತಿಹಾಸವನ್ನು ಪೌರಾಣಿಕ ಶೈಲಿಯಲ್ಲಿ ಹೇಳುವ ವಿಧಾನವನ್ನು ರೂಢಿಸಿಕೊಂಡು ಬಂದಿದ್ದಾರೆಂಬುದಲ್ಲದೆ ಆ ಕಾಲದವರು ಹೇಳುವ ಪುರಾಣಗಳಿಂದ ಶುದ್ಧ ಇತಿಹಾಸವನ್ನು ಹೆಕ್ಕಿ ತೆಗೆಯಬೇಕಾಗುತ್ತದೆ ಎಂಬುದು.

**ಕಾರುಗಹಳ್ಳಿ ಮಾರನಾಯಕನ ಪ್ರಸಂಗ:**

ಕ್ರಿ.ಶ.೧೩೦೦ರ ಅಂತರದಲ್ಲಿ ಹೊಯ್ಸಳರೊಡನೆ ಹೇಗೋ ದೊಂದಿಕೊಂಡು ಹೇಗೋ ಉಳಿದುಕೊಂಡು ಬಂದಿದ್ದ ಗಂಗರಸರ ಕುಟುಂಬವೊಂದು ಹದಿನಾಡು ಎಂಬ ಪುಟ್ಟ ಪಾಳೆಯಪಟ್ಟನ್ನು ಆಳುತ್ತಿತ್ತು. ಇದನ್ನು ಆಳುತ್ತಿದ್ದ ದೊರೆ ಚಾಮುಂಡರಸ ಎಂಬುವನು. ಅವನಿಗೆ ಗಂಡು ಸಂತಾನವಿರಲಿಲ್ಲ. ಅವನು ಅಕಾಲ ಮರಣಕ್ಕೆ ತುತ್ತಾಗಲು ಅವನ ಒಬ್ಬಳೇ ಮಗಳನ್ನು ಅವನ ಸೇನಾಧಿಪತಿಯಾಗಿದ್ದ ಕಾರುಗಹಳ್ಳಿ ಮಾರನಾಯಕನೆಂಬುವನು ತನಗೆ ಕೊಟ್ಟು ಮದುವೆ ಮಾಡಬೇಕೆಂದು ಪಟ್ಟು ಹಿಡಿದನು.

ಈ ಮಾರನಾಯಕನ ಪ್ರಸಂಗ ಜಾನಪದದ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ದೀರ್ಘವಾಗಿ ಪ್ರಸ್ತಾಪವಾಗಿರುವುದಲ್ಲದೆ ಐತಿಹಾಸಿಕ ಮಹತ್ವನ್ನು ಸಾರಿ ಹೇಳುವಂತದ್ದಾಗಿದೆ. ಮಂಟೇಸ್ವಾಮಿಗಳು ಉತ್ತರದ ಸಖರಾಯಪಟ್ಟಣದಿಂದ ಕರೆದುಕೊಂಡು ಬಂದಿದ್ದ ರಾಜಕುಮಾರರಿಂದ ಮಾರನಾಯಕ ಸಂಹಾರವಾಗುತ್ತದೆ. ಮಂಟೇಸ್ವಾಮಿಗಳು, ಇದ್ದ ಇಬ್ಬರು ರಾಜಕುಮಾರರಲ್ಲಿ ಒಬ್ಬನಿಗೆ ಚಾಮುಂಡರಸನ ಮಗಳನ್ನು ಮದುವೆ ಮಾಡಿಸಿ ಹದಿನಾಡು ರಾಜ್ಯಕ್ಕೆ ಅವನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡರು.

ಗಂಗರಸರ ವಂಶದ ಕುರುಹಾಗಿ 'ಅರಸು' ಪದ ಈ ವಂಶದವರಿಗೆ ಉಳಿದು ಬಂದಂತೆ ಮಂಟ್ಯೇದ ಒಡೆಯರು ಈ ರಾಜವಂಶವನ್ನು ಪುನರ್‌ಪ್ರತಿಷ್ಠಾಪನೆ ಮಾಡಿದುದರ ನೆನಪಾಗಿ 'ಒಡೆಯರು' ಎಂಬ ಬಿರುದನ್ನು ಗೌರವ ಪೂರ್ವಕವಾಗಿ ತಮ್ಮ ಹೆಸರಿನೊಡನೆ ಸೇರಿಸಿಕೊಂಡರಂತೆ. ಇದಿಷ್ಟು ಮೌಖಿಕ ಇತಿಹಾಸದಲ್ಲಿ ಉಳಿದು ಬಂದಿರುವ ವಿಷಯವಾದರೆ ಇತ್ತೀಚೆಗೆ ಅಂದರೆ ೨೦೦-೩೦೦ ವರ್ಷಗಳ ಹಿಂದೆ ಆಸ್ಥಾನ ಕವಿಗಳು ಕಟ್ಟಿದ ಕಥೆಯೇ ಬೇರೆ, ಅದೇಂದರೆ:

ಸುಮಾರು ೬೦೦ ವರ್ಷಗಳ ಹಿಂದೆ ಯದುರಾಯ ಎಂಬುವನು ತನ್ನ ತಮ್ಮ ಕೃಷ್ಣರಾಯ ಎಂಬುವವನೊಡನೆ ಉತ್ತರದ ಗುಜರಾತ್ ಪ್ರಾಂತ್ಯದ ದ್ವಾರಕೆಯಿಂದ ದಕ್ಷಿಣದ ಮೈಸೂರಿಗೆ ಬಂದನಂತೆ. ಮೈಸೂರಿನ ಬೆಟ್ಟದ ಚಾಮುಂಡಿದೇವಿಯು ಯದುರಾಯನ ಕನಸಿನಲ್ಲಿ ಕಾಣಿಸಿಕೊಂಡು ಮೈಸೂರಿನ ರಾಣಿ ಕಷ್ಟಕ್ಕೆ ಸಿಕ್ಕಿಕೊಂಡಿರುವಳೆಂದೂ ಅವಳಿಗೆ ನೆರವಾಗಬೇಕೆಂದೂ ಆದೇಶ ನೀಡಿದಳಂತೆ. ದೇವಿಯ ಆದೇಶದ ಮೇರೆ ಯದುರಾಯನು ಮಾರನಾಯಕನನ್ನು ಸಂಹಾರ ಮಾಡಿ ರಾಜಕುಮಾರಿಯನ್ನು ಮದುವೆಯಾದನಂತೆ. ಇವರು ದ್ವಾರಕೆಯ ಕೃಷ್ಣನ ಕುಲದವರಾದ್ದರಿಂದ ಯಾದವರಾದರಂತೆ.

ಇದರಿಂದ ಮಂಟೇಸ್ವಾಮಿಯವರು ನೆರವಾದ ಕಥೆಯನ್ನು ಮರೆಸಿ ಆಸ್ಥಾನ ಕವಿಗಳು ಕಟ್ಟಿರುವ ಕಥೆಯು ಕೇವಲ ಕಾಲ್ಪನಿಕವೆಂಬುದು ಸ್ಪಷ್ಟವಾಗುತ್ತದೆ. ಹೇಗೆಂದರೆ ಮಂಟೇಸ್ವಾಮಿಯವರ ಪ್ರಸಂಗದಿಂದ ಮಂಟೇಸ್ವಾಮಿಯ ಜೊತೆಗಿದ್ದ ಸಖರಾಯಪಟ್ಟಣದ ಮತ್ತೊಬ್ಬ ರಾಜಕುಮಾರನಿಂದಾಗಿ ಅರಮನೆಯ ಮತ್ತು ಮಂಟೇಸ್ವಾಮಿಗಳ ಮಠದ ಸಂಬಂಧ ಚಿರಸ್ಥಾಯಿಯಾಗಿ ಉಳಿಯುವಂತಾಯ್ತು. ಮಂಟೇಸ್ವಾಮಿ

ಸಂಪ್ರದಾಯದ ಬೊಪ್ಪಗೌಡನಪುರ, ಮಳವಳ್ಳಿ, ಚಿಕ್ಕಹಲಗೂರು ಮತ್ತು ಕಪ್ಪಡಿ ಕ್ಷೇತ್ರಗಳ ಒಡೆತನವೆಲ್ಲ ಇಂದಿಗೂ ಈ ಅರಸು ಮನೆತನದವರ ಅಧೀನದಲ್ಲಿರುವುದೇ ಇದಕ್ಕೆ ಹಿರಿಸಾಕ್ಷಿಯೆನಿಸಿದೆ.

**ಗಂಡಭೇರುಂಡ:**

ಮಂಟೇಸ್ವಾಮಿಯವರು ಸಖರಾಯಪಟ್ಟಣದ ರಾಜಕುಮಾರರಲ್ಲಿ ಒಬ್ಬನಿಗೆ ಮೈಸೂರು ಅರಸನ ಮಗಳನ್ನು ಕೊಟ್ಟು ಲಗ್ನ ಮಾಡಿಸಿ ಆತನನ್ನು ಮೈಸೂರು ರಾಜ್ಯಕ್ಕೆ ವಾರಸುದಾರನನ್ನಾಗಿ ಮಾಡಿ ಹೋದದ್ದು ಸರಿಯಷ್ಟೆ. ಆತ ರಾಜ್ಯಭಾರ ಮಾಡಿಕೊಂಡು ಯಾವೊಂದು ತೊಡಕು ತಾಪತ್ರಯವೂ ಇಲ್ಲದೆ ಹಾಯಾಗಿದ್ದನು. ಆದರೆ ಎರಡು–ಮೂರು ವರ್ಷಗಳು ಕಳೆದರೂ ಅವನಿಗೆ ರಾಜಕುಮಾರಿಯಲ್ಲಿ ಮಕ್ಕಳಾಗಲಿಲ್ಲ. ಅಷ್ಟು ಹೊತ್ತಿಗೆ ಆಕಸ್ಮಿಕವಾಗಿ ಅವನಿಗೆ ಕುಂಬಾರಕೊಪ್ಪಲಿನ ಕುಂಬಾರರ ಹುಡುಗಿಯೊಬ್ಬಳ ಗೆಳೆತನ ಬೆಳೆಯಿತು. ಆಕೆ ಈ ರಾಜಕುಮಾರನಿಂದ ಗರ್ಭಿಣಿಯಾಗಿ ಒಂದು ಗಂಡು ಮಗುವಿಗೆ ಜನ್ಮವಿತ್ತಳು. ಈ ಇಬ್ಬರು ಮಕ್ಕಳು ಬೆಳೆದು ಕೈಗೆ ಬರುತ್ತಿರುವಾಗ ರಾಜ ಆಕಸ್ಮಿಕವಾಗಿ ಕಾಲನ ಕೈವಶವಾದನು.

ರಾಜ ತೀರಿಕೊಂಡ ಕೂಡಲೇ ರಾಜಕುಮಾರಿ ಹಾಗೂ ಅವಳ ಪುತ್ರ ತಮ್ಮ ಅರಮನೆಯಲ್ಲಿದ್ದ ಕುಂಬಾರ ಹುಡುಗಿಗೆ ಬಗೆಬಗೆಯಾದ ಕಿರುಕುಳಗಳನ್ನು ಕೊಟ್ಟು ಅವಳನ್ನು ಅವಳ ಮಗನನ್ನು ಅರಮನೆಯಿಂದ ಹೊರದೂಡಿದರು. ಹೀಗೆ ಹೊರಬಂದ ಬಾಲಕ.'ರಾಜನಿಗೆ ನಾನು ಹಿರಿಯ ಮಗನಾದರೂ ನನ್ನ ಸಹೋದರ ನನಗೆ ರಾಜ್ಯಾಭಿಷೇಕ ಮಾಡದೆ ನನ್ನನ್ನು ತಾಯಿಯೊಡನೆ ಹೊರ ಹಾಕಿದನಲ್ಲ. ಇದು ಯಾವ ನ್ಯಾಯ? ಅವನು ನನಗೆ ಪೂರ್ಣ ರಾಜ್ಯ ಕೊಡದಿದ್ದರೆ ಹೋಗಲಿ ಸಮಪಾಲಾದರೂ ಕೊಡಬೇಕಿತ್ತಲ್ಲವೆ?' ಎಂದು ಹಿರಿಯರಿಂದ ಹೇಳಿಸಿದ. ಇದಕ್ಕೆ ರಾಜಕುಮಾರ ಜಪ್ಪಯ್ಯಾ ಎಂದರೂ ಒಪ್ಪಲಿಲ್ಲ.

ರಾಜನನ್ನು ಕೈ ಹಿಡಿದರೂ ಮೂರಾಬಟ್ಟೆಯಾದ ಕುಂಬಾರರ ಹುಡುಗಿ ದಿಕ್ಕು ತೋಚದವಳಾಗಿ 'ಹೆಣ್ಣು ಕೆಟ್ಟರೆ ತವರು ಮನೆ ತಾನೆ ಗತಿ?' ಎಂದು ಕಣ್ಣೀರು ಸುರಿಸುತ್ತ ಕಂದನ ಕೈ ಹಿಡಿದುಕೊಂಡು ಬಂದು ತಂದೆಯ ಮನೆ ಸೇರಿಕೊಂಡಳು. ಈ ಹುಡುಗ ತಾತನಿಗೆ ಸಹಾಯಕನಾಗಿ ನಿಂತು ಕುಂಬಾರಕಲೆಯಲ್ಲಿ ಪರಿಣತಿಯನ್ನು ಪಡೆದನು.

ಹೀಗಿರುವಾಗ ರಾಚಪಾಜಿಯವರು ಬೊಪ್ಪಗೌಡನಪುರದಿಂದ ಕಪ್ಪಡಿಗೆ ಹೋಗುವಾದ ಮೈಸೂರಿಗೆ ಬಂದು ತಂಗಿರುವ ಸಂಗತಿ ಈ ಹುಡುಗನ ಕಿವಿಗೆ ಬಿತ್ತು. ಅವನು ಆ ಕೂಡಲೇ ರಾಚಪ್ಪಾಜಿಯವರನ್ನು ಕಂಡು ತನಗಾಗಿರುವ ಅನ್ಯಾಯವನ್ನು ಭಿನ್ನವಿಸಿಕೊಂಡನು. ಇದನ್ನೆಲ್ಲ ಕೂಲಂಕುಷವಾಗಿ ತಿಳಿದುಕೊಂಡ ರಾಚಪ್ಪಾಜಿಯವರು ಅರಮನೆಗೆ ಸೇವಕರನ್ನು ಕಳಿಸಿ ರಾಜಕುಮಾರನನ್ನು ಕರೆದುಕೊಂಡು ಬರಲು

ತಿಳಿಸಿದರು. ಆದರೆ ದುರಹಂಕಾರಿಯಾಗಿದ್ದ ರಾಜಕುಮಾರ ರಾಚಪ್ಪಾಜಿಯವರ ಕರೆಯನ್ನು ನಿರಾಕರಿಸಿದನು. ಇದರಿಂದ ಬೇಸರಗೊಂಡ ರಾಚಪ್ಪಾಜಿಯವರು. 'ಅವನ ದುನಿಯಾವನ್ನು ಧೂಳೀಪಟ ಮಾಡಬೇಕು. ಅವನನ್ನು ಬೇರು ಸಹಿತ ಕಿತ್ತೆಸೆಯದಿದ್ದರೆ ನನಗೆ ರಾಚಪ್ಪಾಜಿಯೆಂಬ ಹೆಸರೇಕೆ! ಈ ಹುಡುಗ ತಲೆಎತ್ತಿ ನಿಲ್ಲಬೇಕು. ಇವನ ಕೈಮೇಲಾಗಬೇಕು' ಎಂದು ಹೇಳಿಕೊಳ್ಳುತ್ತ ಕುಂಬಾರ ಹುಡುಗನ್ನು ನೋಡುತ್ತ:

'ಈಗ ನೀನೇನು ಕೆಲಸ ಮಾಡುತ್ತಿದ್ದೀಯೆ?' ಎಂದು ಕೇಳಿದರು.

'ಇನ್ನೇನು ಮಾಡಲಿ ಗುರುವೆ? ಕುಂಬಾರಿಕೆ ಮಾಡಿ ಜೀವನ ಸಾಗಿಸುತ್ತಿದ್ದೇನೆ'.

'ನೀನು ಈ ರಾಜಕುಮಾರನನ್ನು ಎದುರಿಸಿ ನಿನಗೆ ಬರಬೇಕಾಗಿರುವ ರಾಜ್ಯವನ್ನು ಗಳಿಸಿಕೊ'.

'ಗುರುವೆ, ನಾನು ಅವನನ್ನು ಎದುರಿಸಿ ನಿಲ್ಲಲು ನನ್ನಲ್ಲಿ ಆಳುಕಾಳು ಸೈನ್ಯವಿದೆಯೆ?'

'ನೀನು ಸೈನ್ಯವನ್ನು ಕಟ್ಟು'

'ಹೇಗೆ ಕಟ್ಟಲಿ ಗುರುವೆ?'

'ನೀನು ನಿನ್ನ ಕುಂಬಾರಿಕೆಯಿಂದಲೇ ಮಣ್ಣಿನಲ್ಲಿ ಚದುರಂಗ ಬಲವನ್ನು ಸಿದ್ಧಪಡಿಸು. ಆ ಮಣ್ಣಿನ ಸೈನ್ಯ ಯುದ್ಧ ಮಾಡುವಂತೆ ನಾನು ಶಕ್ತಿ ಕೊಡುತ್ತೇನೆ.'

'ಹಗೆಂದರೇನು ಗುರುವೆ?'

'ಏನೆಂಬುದನ್ನು ಹೇಳಬರುವುದಿಲ್ಲ. ನೀನು ಮಣ್ಣಿನಲ್ಲಿ ಸೈನ್ಯವನ್ನು ಮಾಡಿ ನಿಲ್ಲಿಸು. ನಾನು ಹೇಳಿದಂತೆ ಮಾಡು. ಊಳಿದದ್ದು ನಿನಗೇ ತಿಳಿಯುತ್ತದೆ' ಎಂದು ಹೇಳಿ ಆಶೀರ್ವದಿಸಿ ಕಳಿಸಿದರು.

ರಾಚಪ್ಪಾಜಿಯವರ ಆದೇಶದಂತೆ ಕುಂಬಾರ ಬಾಲಕನು ತಿಂಗಳಾನುಗಟ್ಟಲೆ ಶ್ರಮಪಟ್ಟು ಮಣ್ಣಿನ ಸೈನ್ಯವನ್ನು ಮಾಡಿ ನಿಲ್ಲಿಸಿದನು. ಗುರುಗಳ ಅಪ್ಪಣೆಯ ಮೇರೆಗೆ ರಾಜಕುಮಾರನೊಡನೆ ಯುದ್ಧಕ್ಕೆ ನಿಂತನು. ವಿಚಿತ್ರವೆಂದರೆ ರಾಜಕುಮಾರನ ಸೈನ್ಯ ಈ ಮಣ್ಣಿನ ಸೈನ್ಯವನ್ನು ಎದುರಿಸಲಾರದೆ ಹೆದರಿ ಓಟ ಕಿತ್ತಿತು. ವೇಗವಾಗಿ ಕುದುರೆಗಳನ್ನು ಹಾರಿಸಿ ಕಾವೇರಿಯ ಆಚೆ ದಡವನ್ನು ಸೇರಿತು. ಆ ಸೈನ್ಯವನ್ನು ನೆನ್ನಟ್ಟಿ ಬಂದ ಮಣ್ಣು ಸೈನ್ಯ ನದಿಯಾಳಕ್ಕಿಳಿದ ಕೂಡಲೇ ಬುಳುಬುಳುನೆ ಪುತುಪುತನೆ ಕುಸಿಯುತ್ತ ಕರಗಿಹೋಯಿತು. ಇಂಥ ಸಮಯವನ್ನೇ ಕಾಯುತ್ತಿದ್ದ ರಾಜಕುಮಾರ ಕುಂಬಾರ ಹುಡುಗನನ್ನು ಅಟ್ಟಾಡಿಸಿಕೊಂಡು ಹೊಡೆದು ನುಗ್ಗುನರಿ ಮಾಡಿ ಓಡಿಸಿದನು. ಹಣ್ಣುಗಾಯಿ ನೀರುಗಾಯಿಯಾಗಿದ್ದ ಕುಂಬಾರ ಬಾಲಕ ರಾಚಪ್ಪಾಜಿಯವರ ಸನ್ನಿಧಿಗೆ ಬಂದು ಅವರ ಪಾದದ ಮೇಲೆ ಕುಸಿದು ಬಿದ್ದನು. ಇದನ್ನು ಕಂಡು ಗುರುಗಳು 'ಇವನ ತಲೆ ಕಾಯುತ್ತೇನೆಂದು ಹೇಳಿ ಈಗ ಇವನ ತಲೆ ಹೋಗುವಂಥ ಸ್ಥಿತಿಗೆ ತಂದೆನಲ್ಲ, ಇರಲಿ' ಎಂದು ಯೋಚಿಸುತ್ತಾ,

'ಮಗು, ನಿರಾಶೆ ಬೇಡ. ನಾಳೆ ನೀನು ಮತ್ತೆ ಯುದ್ಧಕ್ಕೆ ಹೋಗು. ನಿನಗೆ ವಜ್ರಕಾಯವನ್ನು ಕೊಟ್ಟಿದ್ದೇನೆ. ನಾಳೆ ನಿನಗೆ ಜಯ ಖಂಡಿತ. ಅವನನ್ನು ನಾಳೆ ಬಕ್ಕಬೋರಲು ಹಾಕು ಹೋಗು. ನಿನಗೆ ಒಳಿತಾಗಲಿ' ಎಂದು ಹರಸಿ ಕಳಸಿದರು.

ಮಾರನೇ ದಿನವೇ ಯುದ್ಧಕ್ಕೆ ಎಲ್ಲ ಸಿದ್ಧತೆ ನಡೆದು ಕಾಳಗ ಪ್ರಾರಂಭವಾಯಿತು. ಈ ಸಲ ರಾಜಕುಮಾರನ ಸೈನ್ಯ ಧೈರ್ಯದಿಂದ ಹೋರಾಡುತ್ತಿದ್ದರೂ ಕುಂಬಾರ ಹುಡುಗನ ಕಡೆಗೆ ಜಯಲಕ್ಷ್ಮಿ ನುಗ್ಗಿ ಬರುತ್ತಿರುವುದನ್ನು ಕಂಡ ರಾಜಕುಮಾರ ದಿಕ್ಕೆಟ್ಟು ನಿಂತ. ಆಗ ಸೈನ್ಯ ರಾಜಕುಮಾರನ ಸೈನ್ಯವನ್ನು ಹಿಗ್ಗಾಮುಗ್ಗ ಕೊಚ್ಚುತ್ತ ಅಟ್ಟಾಡಿಸುತ್ತಿರುವಾಗ, ರಾಜಕುಮಾರ ಕಣ್ಣು ಕಣ್ಣು ಬಿಡುತ್ತ ಇನ್ನು ನಿಂತರೆ ಪ್ರಯೋಜನವಿಲ್ಲವೆಂದು ಸೈನ್ಯ ಸಮೇತ ದೌಡುಕಿತ್ತ. ಸೈನ್ಯವೆಲ್ಲ ಕಾವೇರಿ ನದಿಯನ್ನು ದಾಟಿ ಪಾರಾಗುತ್ತಿತ್ತು. ಆದರೆ ಕುಂಬಾರ ಹುಡುನ ಮಣ್ಣಿನ ಸೈನ್ಯವು ಬೆನ್ನಟ್ಟಿ ಬಂದು ನೀರಿನಲ್ಲಿ ಮುಳುಗಿ ಕರಗತೊಡಗಿತು. ಆಗ ಆ ಸೈನ್ಯಗಳ ನಡುವೆ ಇದ್ದ ಎರಡು ತಲೆಯ ಕ್ಷಿಯೊಂದು ಆಚೆ ದಡಕ್ಕೆ ಹಾರಿ ಅಲ್ಲಿ ಅಟ್ಟಹಾಸದಿಂದ ಮೆರೆಯುತ್ತ ಕುದುರೆ ಮೇಲಿದ್ದ ರಾಜಕುಮಾರನ ಕುತ್ತಿಗೆಯನ್ನು ಕಚಕ್ಕನೆ ಕತ್ತರಿಸಿ ಹಾಕಿತು. ರಾಜಕುಮಾರ ನೆಲಕ್ಕುರುಳಿದ. ಸೈನ್ಯ ದಿಕ್ಕಾಪಾಲಾಗುತ್ತಿರುವಾಗ ಕುಂಬಾರರ ಹುಡುಗ ಅವರನ್ನೆಲ್ಲ ತಡೆದು ತನ್ನ ಅಧೀನಕ್ಕೆ ತಂದುಕೊಂಡ.

ಹೀಗೆ ರಾಚಪ್ಪಾಜಿಯವರ ಕೃಪೆಯಿಂದ ಕುಂಬಾರರ ಬಾಲಕ ಮೈಸೂರಿಗೆ ಒಡೆಯನಾದ. ಎರಡು ತಲೆ ಪಕ್ಷಿ ತನಗೆ ಸಹಾಯ ಮಡಿದ ಕಾರಣ ಆ ಗಂಡಭೇರುಂಡ ಪಕ್ಷಿಯನ್ನು ತನ್ನ ರಾಜ್ಯದ ಲಾಂಛನವನ್ನಾಗಿ ಮಾಡಿಕೊಂಡ.

ಈ ಕಥೆಯಲ್ಲಿ ಬರುವ ಗಂಡಭೇರುಂಡ ಪಕ್ಷಿ ಅರಸರಿಗೆ ಅದು ರಾಜ ಚಿಹ್ನೆಯಾದ ಬಗೆಗೆ ವಿವರಣೆ ಕೊಡುವಂತದ್ದಾಗಿದೆ. ಈ ಪಕ್ಷಿಯ ಕಲ್ಪನೆ ಪ್ರಾಚೀನ ಈಜಿಪ್ಟ್, ಸುಂಏರಿಯಾ, ಅಸ್ಸೀರಿಯಾ, ಇರಾಕ್, ತುರ್ಕಿ ಮುಂತಾದ ದೇಶಗಳಲ್ಲೂ ಕಂಡುಬಂದಿದೆ. ಕರ್ನಾಟಕದ ಚಾಲುಕ್ಯರ ಕಾಲದ ಶಿಕಾರಿಪುರದ ಬಳ್ಳಿಗಾವೆಯ ದೇವಾಲಯದ ಸ್ತಂಭದಲ್ಲಿ ಈ ಶಿಲ್ಪವಿರುವುದನ್ನು ಗುರುತಿಸಲಾಗಿದೆ. ಕೆಳದಿಯ ಲಾಂಛನವೂ ಗಂಡಭೇರುಂಡವೇ ಆಗಿದೆ. ಇದು ಸಾರ್ವಭೌಮತ್ವದ ಸಂಕೇತವಾಗಿ ಬಳಕೆಯಾದಂತೆ ಕಾಣುತ್ತದೆ. ಮೈಸೂರು ಅರಸರೂ ಬಳಸಿಕೊಂಡು ಬಂದಿದ್ದ ಈ ಲಾಂಛನ ಈಗ ಕರ್ನಾಟಕ ಸರ್ಕಾರದ ಲಾಂಛನವೂ ಆಗಿದೆ.

**ಮೈಸೂರು ರಾಜ್ಯದ ಧ್ವಜ:**

ಮೈಸೂರು ಅರಸರು ಬಳಸುತ್ತಿದ್ದ ಧ್ವಜದ ಬಗೆಗೂ ಒಂದು ಐತಿಹ್ಯವಿದೆ. ರಾಚಪ್ಪಾಜಿಯವರು ಯುದ್ಧಕ್ಕೆ ಸಿದ್ಧನಾಗಿ ಬಂದ ಕುಂಬಾರಕೊಪ್ಪಲಿನ ರಾಜಕುಮಾರನಿಗೆ 'ವಿಜಯಿಯಾಗು!' ಎಂದು

ಆಶೀರ್ವದಿಸುತ್ತ ಹೊದಿಸಿದ ಕಾವಿವಸ್ತ್ರವೇ ಆ ಹುಗುಗನ ವಿಜಯದ ಸಂಕೇತವಾದ ಧ್ವಜವಾಗಿ ಅದು ಅವನ ರಾಜ್ಯದ ಧ್ವಜವೂ ಆಯಿತಂತೆ. ಹೀಗೆ ಮೈಸೂರು ಅರಸರ ಜೊತೆಗೆ ಮಂಟೇಸ್ವಾಮಿಯವರ ಹಾಗೂ ರಾಚಪ್ಪಾಜಿಯರ ಸಂಬಂದ ಆ ಕಾಲದಿಂದ ಇಂದಿನವರೆಗೂ ನಡೆದುಕೊಂಡು ಬಂದಿದೆ.

**ರತ್ನಸಿಂಹಾಸನ:**

ಮೈಸೂರು ಅರಮನೆಯಲ್ಲಿರುವ ರತ್ನಸಿಂಹಾಸನದ ಬಗೆಗೆ ಒಂದು ಐತಿಹ್ಯವಿದೆ. ಈ ರತ್ನಸಿಂಹಾಸನವು ಹಸ್ತಿನಾವತಿಯನ್ನು ಆಳುತ್ತಿದ್ದ ಪಾಂಡವರಿಗೆ ಸೇರಿದ್ದಂತೆ. ಧರ್ಮರಾಯನ ಈ ರತ್ನಸಿಂಹಾಸನ ಅನಂತರದಲ್ಲಿ ಹಲವಾರು ತಲೆಮಾರುಗಳು ಕಳೆದು ಅದು ಕಂಪಿಲಾರಾಯನೆಂಬವನಿಗೆ ಸಿಕ್ಕಿತಂತೆ. ಅವನು ಅದನ್ನು ಹಸ್ತಿನಾವತಿಯಿಂದ ತಂದು ಆಂಧ್ರಪ್ರದೇಶದ ಪೆನುಗೊಂಡೆಯ ಭೂಮಿಯೊಳಗೆ ಹೂತಿಟ್ಟನಂತೆ. ಅದು ಹೀಗೆ ಭೂಮಿಯೊಳಗಿರುವುದು ಯಾರಿಗೂ ತಿಳಿದಿರಲಿಲ್ಲವಂತೆ. ಆದರೆ ಆ ಹೂತಿಟ್ಟಿದ್ದ ಸ್ಥಳ ಒಂದು ದಿಬ್ಬದಂತೆ ಕಾಣುತ್ತಿತ್ತಂತೆ.

ದನಕರುಗಳನ್ನು ಕಾಯಲು ಬರುತ್ತಿದ್ದ ಹುಡುಗರು ಆ ದಿಬ್ಬದ ಮೇಲೆ ಕುಳಿತ ಕೂಡಲೇ ಅವರಿಗೆ ನ್ಯಾಯ ಅನ್ಯಾಯಗಳನ್ನು ತೂಕ ಮಾಡಿ ತೀರ್ಮಾನ ಕೊಡುವ ದಿವ್ಯಜ್ಞಾನ ಉಂಟಾಗುತ್ತಿತ್ತಂತೆ. ಇದರ ಮಹಿಮೆಯನ್ನು ಗುರುತಿಸಿದ್ದ ಜನರು ಅದನ್ನು ನ್ಯಾಯದ ಗುಡ್ಡ ಅಥವಾ ದೇವರಗುಡ್ಡ ಎಂದು ಕರೆಯುತ್ತಿದ್ದರಂತೆ. ಈ ದಿವ್ಯಜ್ಞಾನ ಉಂಟಾಗುವ ಮರ್ಮವಾಗಲಿ ಇದು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಉತ್ತರವಾಗಲು ಯಾರೊಬ್ಬರಿಗೂ ತಿಳಿದಿರಲಿಲ್ಲವಂತೆ.

ಒಮ್ಮೆ ವಿಜಯನಗರದ ವಿಭೂತಿಪುರುಷ ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕರಲ್ಲೊಬ್ಬನಾಗಿದ್ದ ವೀರ ಹರಿಹರನೊಡನೆ ಬರುತ್ತಿದ್ದಾಗ ಅವರ ದಿವ್ಯದೃಷ್ಟಿಗೆ ಮಣ್ಣಿನೊಳಗೆ ಹೂತು ಹೋಗಿದ್ದ ಈ ರತ್ನಸಿಂಹಾಸನ ಗೋಚರಿಸಿತಂತೆ. ಅವರು ಆ ವಿಷಯವನ್ನು ಹರಿಹರನಿಗೆ ತಿಳಿಸಿ ಮಣ್ಣನ್ನು ತೆಗೆಸಿದಾಗ ರತ್ನಸಿಂಹಾಸನ ದೊರೆಯಿತಂತೆ. ಹೀಗೆ ಸಿಕ್ಕ ಅದು ವಿಜಯಗರ ಅರಸರ ಆಸ್ಥಾನದಲ್ಲಿ ಒಂದೂವರೆ ಶತಮಾನಗಳ ಕಾಲ ಉಳಿದಿತ್ತಂತೆ.

ಈ ಐತಿಹ್ಯದಲ್ಲಿ ಪ್ರಸ್ತಾಪವಾಗಿರುವ ಪರಕೀಯರ ಪಾಲಾಗದಂತೆ ಹೂತುಹೋಗಿತ್ತೆಂಬ ವಿಷಯ ಈ ಸಿಂಹಾಸನವು ಪರಕೀಯರ ಪಾಲಾಗದಂತೆ ರಕ್ಷಿಸುವುಕ್ಕೋಸ್ಕರವಾಗಿಯೇ ಭೂಮಿಯೊಳಗೆ ಹೂತಿಟ್ಟಿದ್ದರೆಂದು ಊಹಿಸಬಹುದಾಗಿದೆ.

ಮೈಸೂರನ್ನು ಆಳುತ್ತಿದ್ದ ಒಡೆಯರಲ್ಲಿ 1578–1617ರವರೆಗೆ ಆಳಿದ ರಾಜ ಒಡೆಯರು ಮಹಾಸಮರ್ಥರೂ ದೈವಭಕ್ತರೂ ಮಹತ್ವಾಕಾಂಕ್ಷಿಗಳೂ ಆಗಿದ್ದರು. ಇವರು ವಿಜಯನಗರದ ಅರಸರಿಗೆ ಕಪ್ಪಕಾಣಿಕೆಯನ್ನು ಒಪ್ಪಿಸುತ್ತಿದ್ದ ಒಬ್ಬ ಸ್ಥಾನಿಕ ದೊರೆಯಾಗಿದ್ದರು. ವಿಜಯನಗರವು ಪರಕೀಯರ ದಾಳಿಗೆ

ತುತ್ತಾಗಿ ತನ್ನ ಅವನತಿಯ ಹತ್ತಿರದಲ್ಲಿದ್ದ ಕಾಲದಲ್ಲಿ ಶ್ರೀರಂಗಪಟ್ಟಣವನ್ನು ಶ್ರೀರಂಗರಾಯ ಎಂಬುವನು ವಿಜಯನಗರದ ಪ್ರತಿನಿಧಿಯಾಗಿ ಆಳುತ್ತಿದ್ದನು. ಈತನ ಕಾಲದಲ್ಲಿ ವಿಜಯನಗರದಲ್ಲಿದ್ದ ರತ್ನಸಿಂಹಾಸನವನ್ನು ಶ್ರೀರಂಗಪಟ್ಟಣಕ್ಕೆ ತರಲಾಯಿತಂತೆ.

ಶ್ರೀರಂಗರಾಯನಿಗೆ ಬೆನ್ನುಫಣಿಯಾಗಿ ನರಳುತ್ತಿರುವ ಸಂದರ್ಭದಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಈಗ ಯುದ್ಧಕ್ಕೆ ನಿಂತರೆ ತನಗೆ ಸೋಲು ಶತಸಿದ್ಧವೆಂದು ಬಲ್ಲವನಾಗಿದ್ದ ಶ್ರೀರಂಗರಾಯ 1610ರಲ್ಲಿ ಶ್ರೀರಂಗಪಟ್ಟಣವನ್ನೂ ವಿಜಯನಗರದ ಅರಸರಿಗೆ ಪಾರಂಪರಿಕವಾಗಿ ಬಂದಿದ್ದ ರತ್ನಸಿಂಹಾಸನವನ್ನೂ ರಾಜ ಒಡೆಯರಿಗೆ ಒಪ್ಪಿಸಿದರು. ಅನಂತರ ತಲಕಾಡಿನ ವೈದ್ಯನಾಥೇಶ್ವರನನ್ನು ಅರ್ಚಿಸಿ ಬೆನ್ನುಫಣಿಯಿಂದ ಮುಕ್ತನಾಗಲು ನಿರ್ಧರಿಸಿ ತನ್ನ ಧರ್ಮಪತ್ನಿ ಅಲಮೇಲಮ್ಮನೊಡನೆ ತಲಕಾಡಿಗೆ ಹೋಗಿ ನೆಲಸಿ ಬೆನ್ನುಫಣಿ ವಾಸಿಯಾಗದೇ ಕೆಲವು ತಿಂಗಳಲ್ಲೆ ತೀರಿಕೊಂಡನಂತೆ.

ಶ್ರೀರಂಗರಾಯನ ತರುವಾಯ ಸರ್ವಸ್ವತಂತ್ರರಾದ ರಾಜ ಒಡೆಯರು ಶ್ರೀರಂಗಪಟ್ಟಣವನ್ನೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. 1610 ರಿಂದ ಸುಮಾರು ಮುನ್ನೂರು ವರ್ಷಗಳ ತನಕ ಮೈಸೂರು ಅರಸರಿಗೆ ಶ್ರೀರಂಗಪಟ್ಟಣವೇ ರಾಜಧಾನಿಯಾಗಿತ್ತು. ಶ್ರೀರಂಗಪಟ್ಟಣದ ಸಾರ್ವಭೌಮತ್ವ ದೊರೆತ ರಾಜ ಒಡೆಯರು ಕ್ರಿ.ಶ.1610ರಲ್ಲಿ ಪ್ರಪ್ರಥಮ ಬಾರಿಗೆ ಈ ರತ್ನಸಿಂಹಾಸನವನ್ನೇರಿದರು. ಅಂದಿನಿಂದ ಈ ರತ್ನಸಿಂಹಾಸನ ಮೈಸೂರು ಅರಸರ ಸ್ವತ್ತಾಯಿತು.

**ಪರಾಮರ್ಶನ ಗ್ರಂಥಗಳು**

1. ಸೂರ್ಯನಾಥ ಕಾಮತ್ – ಗ್ಯಾಸೇಟಿಯರ್ ಆಫ್ ಮೈಸೂರು ಡಿಸ್ಟ್ರಿಕ್ಟ–1986
2. ಎಂ.ವಿ.ಕೃಷ್ಣರಾವ್, ಎಂ.ಕೇಶವಭಟ್ಟ– ಕರ್ನಾಟಕ ಇತಿಹಸ ದರ್ಶನ,ಬೆಂಗಳೂರು–1970
3. ಡಿ.ಆರ್.ಚನ್ನೇಗೌಡ – ನಮ್ಮ ಮಹಾರಾಜರು,ಬೆಂಗಳೂರು
4. ಆರ್.ಆರ್.ದಿವಾಕರ್ (ಸಂ) – ಕರ್ನಾಟಕ ಪರಂಪರೆ ಸಂ–2, ಬೆಂಗಳೂರು–1970
5. ಡಾ.ಪಿ.ವಿ.ನಂಜರಾಜ ಅರಸು – ಒಡೆಯರವರ ವಂಶರತ್ನಾಕರ, ಮೈಸೂರು
6. ಡಾ.ವಿ.ಕೃಷ್ಣಸ್ವಾಮಿ ಅಯ್ಯಂಗಾರ್ – ಏನ್ಸಿಯಂಟ್ ಇಂಡಿಯಾ
7. ಲೂಯಿ ರೈಸ್ – ಮೈಸೂರು ಭಾಗ 1 ಮತ್ತು 2
8. ಮೈಸೂರು ಗ್ಯಾಸೆಟಿಯರ್ಸ್, ಬೆಂಗಳೂರು
9. ಹ್ಯಾಂಡ್ ಬುಕ್ ಆಫ್ ದಿ ಸಿಟಿ ಆಫ್ ಮೈಸೂರು– ಬೆಂಗಳುರು–1915

10. ಶ್ರೀಮಾನ್ ಹಾ.ರಾಜರವರ – ವಂಶಾವಳಿ (ಭಾಗ-1ಮತ್ತು 2) ಕರ್ನಾಟಕ ರಾಜ್ಯ ಪತ್ರಗಾರದ ಮುಜರಾಯಿ ಫೈಲ್‌ಗಳು
11. ಹಾ.ಮಾ.ನಾಯಕ – ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳು-1,2,3,4,5,6,7- ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
12. ಕರ್ನಾಟಕ ವಿಷಯ ವಿಶ್ವಕೋಶ – 1976, ಪ್ರಸಾರಾಂಗ, ವಿಶ್ವವಿದ್ಯಾನಿಲಯ, ಮೈಸೂರು
13. ಕರ್ನಾಟಕ ಸ್ಟೇಟ್ ಗ್ಯಾಸೇಟಿಯರ್- ಮೈಸೂರು ಸ್ಟೇಟ್, ಕರ್ನಾಟಕ ಸ್ಟೇಟ್ ಪಬ್ಲಿಕೇಶನ್-1988